ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 27-02-1996.

# *ಸತ್ಯತೆಯ ಬುನಾದಿ(ತಳಪಾಯ) ಪವಿತ್ರತೆಯಾಗಿದೆ. ಹಾಗೂ ಅದಕ್ಕೆ ಗುರುತು ಚಲನೆ ಹಾಗೂ ಚಹರೆಯಲ್ಲಿ ದಿವ್ಯತೆ.*

(सत्यता का फाउण्डेशन है पवित्रता और निशानी है-चलन वा चेहरे में दिव्यता)

ಇಂದು ಸತ್ಯ ತಂದೆ, ಸತ್ಯ ಶಿಕ್ಷಕ, ಸದ್ಗುರುವು ತನ್ನ ನಾಲ್ಕೂ ಕಡೆಯ ಸತ್ಯತೆಯ ಶಕ್ತಿಸ್ವರೂಪ ಮಕ್ಕಳನ್ನು ನೋಡುತ್ತಾ ಇದ್ದಾರೆ. ಸತ್ಯತೆಯ ಫೌಂಡೇಷನ್ ಪವಿತ್ರತೆಯಾಗಿದೆ. ಹಾಗೂ ಸತ್ಯತೆಯ ಪ್ರತ್ಯಕ್ಷ ಪ್ರಮಾಣವು ಏನಾಗಿದೆಯೆಂದರೆ ಚೆಹರೆಯಲ್ಲಿ ಹಾಗೂ ನಡೆವಳಿಕೆಯಲ್ಲಿ ದಿವ್ಯತೆಯ ಇರುವುದು ಪ್ರಪಂಚದಲ್ಲಿಯೂ ಅನೇಕ ಆತ್ಮರು ತಮ್ಮನ್ನು ಸತ್ಯವಾದಿಯೆಂದು ಹೇಳಿಕೊಳ್ಳುತ್ತಾರೆ. ಆದರೆ ಪವಿತ್ರತೆಯ ಆಧಾರದಿಂದಲೇ ಸಂಪೂರ್ಣ ಸತ್ಯತೆ ಇರುತ್ತದೆ. ಪವಿತ್ರತೆ ಇಲ್ಲದಿದ್ದರೆ ಸದಾ ಸತ್ಯತೆ ಇರುವುದಿಲ್ಲ. ನಿಮ್ಮೆಲ್ಲರ ಬುನಾದಿ ಏನು? ಪವಿತ್ರತೆ ಪವಿತ್ರತೆಯ ಆಧಾರದಿಂದಲೇ ಸತ್ಯತೆಯ ಸ್ವರೂಪ ಸ್ವತಹವಾಗಿ ಮತ್ತು ಸಹಜವಾಗಿ ಸದಾ ಇರುತ್ತದೆ. ಸತ್ಯತೆ ಎಂದು ಕೇವಲ ಸತ್ಯವನ್ನು ಹೇಳುವುದು, ಸತ್ಯವಾದುದನ್ನು ಮಾಡುವುದಕ್ಕೆ ಹೇಳುವುದಿಲ್ಲ. ಆದರೆ ಎಲ್ಲಕ್ಕಿಂತಲೂ ಮೊದಲನೆಯ ಸತ್ಯ ಯಾವುದರಿಂದ ನಿಮಗೆ ಪವಿತ್ರತೆಯ ಅಥವಾ ಸತ್ಯತೆಯ ಶಕ್ತಿಯು ಬಂದಿತೋ ಅದು. ಮೊದಲನೆಯ ವಿಚಾರವು ನಿಮ್ಮ ಸತ್ಯ ಸ್ವರೂಪವನ್ನು ತಿಳಿದುಕೊಂಡಿದ್ದು - ನಾನು ಆತ್ಮನಾಗಿದ್ದೇನೆ ಎನ್ನುವ ಸತ್ಯ ಸ್ವರೂಪವನ್ನು ಮುಂಚೆ ತಿಳಿದುಕೊಂಡಿರಲಿಲ್ಲ. ಆದರೆ ಮೊದಲನೆಯ ಸತ್ಯ ನಿಮ್ಮ ಸ್ವರೂಪವನ್ನು ತಿಳಿದುಕೊಂಡಿದ್ದೀರಿ. ನಾನು ಇಂತಹವನಾಗಿದ್ದೇನೆ (ಇಂತಹವಳಾಗಿದ್ದೇನೆ) ಎನ್ನುವ ದೇಹದ ಗಣನೆಯಿಂದ ತಿಳಿದುಕೊಂಡರೆ ಅದು ಸತ್ಯಸ್ವರೂಪವೇ? ಸತ್ಯ ಸ್ವರೂಪವು ಮೊದಲು ಸ್ವ (ಆತ್ಯ) ಸ್ವರೂಪವಾಗಿದೆ ಹಾಗೂ ಅನಂತರ ತಂದೆಯ ಸತ್ಯ. ಪರಿಚಯವನ್ನು ತಿಳಿದುಕೊಂಡಿದ್ದೀರಿ. ನಿಮ್ಮ ಸತ್ಯ ಸ್ವರೂಪವನ್ನೂ ಹಾಗೂ ತಂದೆಯ ಸತ್ಯ ಪರಿಚಯವನ್ನೂ ಚೆನ್ನಾಗಿ ತಿಳಿದುಕೊಂಡುಬಿಟ್ಟಿದ್ದೀರಾ? ಮೂರನೆಯ ವಿಚಾರ - ಈ ಸೃಷ್ಟಿ ಚಕ್ರವನ್ನೂ ಸಹ ಸತ್ಯಸ್ವರೂಪದಿಂದ ತಿಳಿದುಕೊಂಡಿದ್ದೀರಿ. ಈ ಚಕ್ರವು ಏನಾಗಿದೆ ಹಾಗೂ ಇದರಲ್ಲಿ ನನ್ನ ಪಾತ್ರವು ಏನಾಗಿದೆ ಎಂದು ನಿಮ್ಮ ಪಾತ್ರವನ್ನೂ ಚೆನ್ನಾಗಿ ಸ್ಪಷ್ಟ ರೂಪದಿಂದ ತಿಳಿದುಕೊಂಡು ಬಿಟ್ಟಿದ್ದೀರಿ, ನಿಮ್ಮ ಪಾತ್ರವನ್ನು ತಿಳಿದುಕೊಂಡಿದ್ದೀರಾ? ನಿಮ್ಮ ಪಾತ್ರವು ಉತ್ತಮವಾಗಿದೆಯಲ್ಲವೇ? ಎಲ್ಲಕ್ಕಿಂತಲೂ ಉತ್ತಮವಾದ ಪಾತ್ರವು ಸಂಗಮಯುಗದ್ದಾಗಿದೆಯೆಂದು ಹೇಳಬಹುದು ಆದರೆ ನಿಮ್ಮ ದೇವ ಆತ್ಮನ ಪಾತ್ರವೂ ಸಹ ವಿಶ್ವದಲ್ಲಿ ಇಡೀ ಚಕ್ರದಲ್ಲಿ ಬರುವ ಆತ್ಮರಿಗಿಂತಲೂ ಶ್ರೇಷ್ಠವಾಗಿದೆ. ಧರ್ಮಸ್ಥಾಪಕರು, ಮಹಾನ್ ಆತ್ಮರೂ ಸಹ ಪಾತ್ರವನ್ನು ಅಭಿನಯಿಸುತ್ತಾರೆ. ಆದರೆ ಅವರು ಆತ್ಮ ಹಾಗೂ ಶರೀರ ಎರಡರಿಂದಲೂ ಪವಿತ್ರರಾಗಿರುವುದಿಲ್ಲ ಆದರೆ ದೇವಾತ್ಮರಾದ ನೀವು ಶರೀರ ಹಾಗೂ ಆತ್ಮ ಎರಡರಿಂದಲೂ ಪವಿತ್ರರಾಗಿರುತ್ತೀರಿ. ಇಡೀ ಕಲ್ಪದಲ್ಲಿ ಅನ್ಯ ಯಾವ ಆತ್ಮರೂ ಹೀಗೆ ಶರೀರ ಹಾಗೂ ಆತ್ಮ

ಎರಡರಿಂದಲೂ ಪವಿತ್ರರಾಗಿರುವುದಿಲ್ಲ. ಹೀಗೆ ಪವಿತ್ರತೆಯ ಫೌಂಡೇಷನ್ ನಿಮ್ಮ ಹೊರತು ಅನ್ಯ ಯಾವ ಆತ್ಮರಿಗೂ ಇಷ್ಟು ಶ್ರೇಷ್ಠವಾಗಿರುವುದಿಲ್ಲ. ದೇವಾತ್ಮನ ಪಾತ್ರವು ನಿಮಗೆ ನೆನಪಿದೆಯೇ? ಪಾಂಡವರಿಗೆ ನೆನಪಿದೆಯೇ? ದೇವ ಆತ್ಮನ ಪವಿತ್ರತೆಯು ಸ್ವಾಭಾವಿಕ ರೂಪದಲ್ಲಿ ಇರುತ್ತದೆ. ಮಹಾನ್ ಆತ್ಮರು ಆತ್ಮರನ್ನು ತುಂಬಾ ಪುರುಷಾರ್ಥದಿಂದ ಪವಿತ್ರ ಮಾಡುತ್ತಾರೆ. ಆದರೆ ಅದು ಸಹಜವಾಗಿ ಇರುವುದಿಲ್ಲ ಸಂಸ್ಕಾರವಾಗಿರುವುದಿಲ್ಲ ಆದರೆ ಅಲ್ಲಿ ಯಾವ ಪುರುಷಾರ್ಥವೂ ಇರುವುದಿಲ್ಲ.  ಇಲ್ಲಿ ಮಾಡಿರುವ ಪುರುಷಾರ್ಥದಿಂದ ಅಲ್ಲಿ ಸಹಜವಾಗಿ ಬಿಡುತ್ತದೆ.  ಏಕೆಂದರೆ ಅಲ್ಲಿ ಅಪವಿತ್ರತೆಯ ನಾಮರೂಪಗಳು ಇರುವುದಿಲ್ಲ. ಅಪವಿತ್ರತೆ ಎಂಬುದು ಇರುತ್ತದೆ ಎಂದು ಕೂಡಾ ತಿಳಿದೇ ಇರುವುದಿಲ್ಲ.  ಆದ್ದರಿಂದ ನಿಮ್ಮ ಪವಿತ್ರತೆಯ ಪ್ರತ್ಯಕ್ಷ ಸ್ವರೂಪ ದೇವತೆ ಅರ್ಥಾತ್ ದಿವ್ಯತೆಯಾಗಿದೆ. ಈ ಸಮಯದಲ್ಲಿ ಪ್ರಪಂಚದ ಮನುಷ್ಯರು ತಮ್ಮನ್ನು ಎಷ್ಟೇ ಸತ್ಯವಂತರೆಂದು ತಿಳಿದುಕೊಂಡರೂ ಸಹ ಸ್ವ (ಆತ್ಮ) ಸ್ವರೂಪದ ಸತ್ಯತೆಯನೇ ಅರಿತುಕೊಂಡಿಲ್ಲ. ತಂದೆಯ ಸತ್ಯ ಪರಿಚಯವನ್ನೇ ತಿಳಿದುಕೊಂಡಿಲ್ಲ. ಆದ್ದರಿಂದ ಸಂಪೂರ್ಣ ಸತ್ಯಸ್ವರೂಪ ಎಂದು ಹೇಳುವುದಿಲ್ಲ. ನಿಮ್ಮಲ್ಲಿಯೂ ಸಹ ಸತ್ಯತೆಯ ಶಕ್ತಿಯು ಯಾವಾಗ ಸದಾ ಇರುತ್ತದೆಯೆಂದರೆ, ನಿಮ್ಮ ಹಾಗೂ ತಂದೆಯ ಸ್ಮೃತಿಯು ಸದಾ ಇದ್ದಾಗಲೇ ಇರುತ್ತದೆ & ಸ್ವತಃವಾಗಿಯೇ ನಿಮ್ಮ ಪ್ರತಿಯೊಂದು ಸಂಕಲ್ಪವೂ ಸಹ ಸತ್ಯವಾಗಿರುವುದು. ಈಗ ಯಾವಾಗಲಾದರೂ ಮರೆತೂಬಿಡುತ್ತೀರಿ. ದೇಹ ಅಭಿಮಾನದಲ್ಲಿ ಬಂದು ಬಿಡುವುದರಿಂದ ಸಂಕಲ್ಪವು  ಸದಾ ಸತ್ಯತೆ ಮತ್ತು ಪವಿತ್ರತೆಯ ಶಕ್ತಿಯಿಂದ ಶಕ್ತಿಶಾಲಿಯಾಗಿ ಇರುತ್ತಿಲ್ಲ.  ಸದಾ ಇರುತ್ತದೆಯೋ ಅಥವಾ ವ್ಯರ್ಥವೂ ಆಗುತ್ತದೆಯೋ? ವ್ಯರ್ಥವಾದುದನ್ನು ಸತ್ಯವಾದುದೆಂದು ಕರೆಯುತ್ತಾರೇಯೇ, ಕರೆಯುವುದಿಲ್ಲವೇ? ಅಸತ್ಯವನ್ನಂತೂ ನುಡಿಯದೇ ಇರುವುದರಿಂದ ಏಕೆ ಸತ್ಯವಲ್ಲ? ನಾನು ಎಂದೂ ಸುಳ್ಳು ಹೇಳುವುದಿಲ್ಲ, ಸದಾ ಸತ್ಯವನ್ನು ಹೇಳುತ್ತೇನೆಂದು ಒಂದುವೇಳೆ ಯಾರಾದರೂ ತಿಳಿದುಕೊಂಡಿದ್ದರೆ, ಸತ್ಯತೆಯ ಗುರುತು(ಚಿಹ್ನೆ) ಏನಾಗಿದೆಯೆಂದರೆ, ಸಂಕಲ್ಪ, ಮಾತು, ಕರ್ಮ, ಸಂಬಂಧ- ಸಂಪರ್ಕ ಎಲ್ಲದರಲ್ಲಿಯೂ ದಿವ್ಯತೆಯು ಅನುಭವವಾಗುವುದು.  ಸತ್ಯವನ್ನು ಹೇಳುತ್ತಿದ್ದರೂ ಸತ್ಯತೆ ಇರುವುದಿಲ್ಲ. ನಾನು ಸತ್ಯವನ್ನು ಹೇಳುತ್ತೇನೆ, ನಾನು ಸತ್ಯವನ್ನು ಹೇಳುತ್ತೇನೆ, ನಾನು ಸದಾ ಸತ್ಯವಂತೆಯಾಗಿದ್ದೇನೆ. ಎಂದು ಅನೇಕರು ಪದೇ ಪದೇ ಹೇಳುವುದನ್ನು ನೀವು ನೋಡಬಹುದು ಆದರೆ ಮಾತಿನಲ್ಲಿ, ಕರ್ಮದಲ್ಲಿ, ಒಂದುವೇಳೆ ದಿವ್ಯತೆಯಿಲ್ಲದಿದ್ದರೆ ಅನ್ಯರಿಗೆ ನಿಮ್ಮ ಸತ್ಯವು ಸತ್ಯವೆನಿಸುವುದಿಲ್ಲ. ಇವರು ತಾವು ಹೇಳುವುದನ್ನು ಸತ್ಯವೆಂದು ಸಿದ್ಧ ಮಾಡುತ್ತಿದ್ದಾರೆಂದೇ ತಿಳಿದುಕೊಳ್ಳುತ್ತಾರೆ ಆದರೆ ಇದು ಸತ್ಯವಾಗಿದೆಯೆಂದು ಅವರಿಗೆ ಮನವರಿಕೆಯಾಗುವುದಿಲ್ಲ. ಸತ್ಯವನ್ನು ಸಿದ್ಧ ಮಾಡುವ ಸಲುವಾಗಿ ಅದನ್ನು ಪ್ರಮಾಣೀಕರಿಸುವ ಅವಶ್ಯಕತೆ ಇರುವುದಿಲ್ಲ. ಒಂದುವೇಳೆ ನಿಮ್ಮ ಸತ್ಯವನ್ನು ಹಠದಿಂದ ಸಿದ್ಧಮಾಡಿದರೆ, ಆ ದಿವ್ಯತೆಯು ಗೋಚರವಾಗುವುದಿಲ್ಲ, ಸಾಧಾರಣತೆಯು ಕಂಡುಬರುತ್ತದೆ. ಇದನ್ನು ಪ್ರಪಂಚದಲ್ಲಿ ಜನರೂ ಮಾಡುತ್ತಾರೆ ಆದರೆ ಬಾಪ್‌ದಾದಾರವರು ಸತ್ಯದ ಗುರುತಿಗಾಗಿ ಒಂದು ಸ್ಲೋಗನ್ ಹೇಳುತ್ತಾರೆ. ಸಾಕಾರ ಬ್ರಹ್ಮಾರವರ ಮೂಲಕವೂ ಕೇಳಿದ್ದಿರಿ. ಯಾರು ಸತ್ಯವಂತರಾಗಿರುತ್ತಾರೋ ಅವರು ಹೇಗೆ ಕಂಡುಬರುವರು, "ಸತ್ಯವನ್ನು ಹೇಳುವವರು ಸದಾ ಖುಷಿಯಲ್ಲಿ ನಾಟ್ಯ ಮಾಡುತ್ತಾ ಇರುತ್ತಾರೆ". ಆದರೆ ನೀವು ಅದನ್ನು ಹಠದಿಂದ ಪ್ರಮಾಣೀಕರಿಸಿದರೆ ನಿಮ್ಮ ಮುಖ ಅಥವಾ ಇತರರ ಮುಖ ಖುಷಿಯಾಗಿ ಕಾಣಿಸುವುದಿಲ್ಲ. ಸ್ವಲ್ಪ ಯೋಚಿಸುತ್ತಿದ್ದ ಹಾಗೆ ಮತ್ತು ಸ್ವಲ್ಪ ಉದಾಸೀನದಿಂದ ಕಾಣಿಸುತ್ತದೆ. ನಾಟ್ಯ ಮಾಡುವಂತೆ ಇರುವುದಿಲ್ಲ. ಸತ್ಯವಾದವರು ಖುಷಿಯಿಂದ ನಾಟ್ಯ ಮಾಡುತ್ತಾರೆ. ಖುಷಿಯಲ್ಲಿ

ಜೀವನದ ಹಗಲು ಅಥವಾ ರಾತ್ರಿಯು ತುಂಬಾ ಚೆನ್ನಾಗಿದೆಯೆನಿಸುತ್ತದೆ. ಆದರೆ ಸತ್ಯದಲ್ಲಿ ಅಲ್ಪಸ್ವಲ್ಪವಾದರೂ ಅಸತ್ಯವು ಬೆರಕೆಯಿದ್ದರೆ ಆ ಸಮಯದ ಜೀವನವು ಅಷ್ಟು ಚೆನ್ನಾಗಿದೆಯೆನಿಸುವುದಿಲ್ಲ. ಸತ್ಯತೆಯ ಅರ್ಥವೇ ಏನಾಗಿದೆಯೆಂದರೆ ಸತ್ಯ ಸ್ವರೂಪದಲ್ಲಿ ಸ್ಥಿತರಾಗಿ ಸಂಕಲ್ಪವನ್ನಾಗಲೀ, ಮಾತನ್ನಾಗಲೀ, ಕರ್ಮವನ್ನಾಗಲಿ ಮಾಡಿರಿ.

ಈಗಿನ ಸಮಯದಲ್ಲಿ ಪ್ರಪಂಚದ ಜನರಂತೂ ಸ್ಪಷ್ಟವಾಗಿ ಏನು ಹೇಳುತ್ತಾರೆಂದರೆ ಈಗಿನ ಕಾಲದಲ್ಲಿ ಸತ್ಯವಂತರಾದ ಜನರು ಜೀವನ ನಡೆಸುವುದೇ ಕಷ್ಟವೆಂದೂ, ಸುಳ್ಳು ಹೇಳಲೇ ಬೇಕಾಗುತ್ತದೆಯೆಂದೂ ಹೇಳುತ್ತಾರೆ. ಆದರೆ ಹಲವರು ಸಮಯದನುಸಾರ ಹಲವು ಪರಿಸ್ಥಿತಿಗಳಲ್ಲಿ ಬ್ರಾಹ್ಮಣ ಆತ್ಮರೂ ಸಹ ಬಾಯಿಯಿಂದ ಹೇಳುವುದಿಲ್ಲ. ಆದರೆ ಅಂತರ್ಯದಲ್ಲಿ ಏನು ತಿಳಿದುಕೊಳ್ಳುತ್ತಾರೆಂದರೆ, ಅದನ್ನು ಒಮ್ಮೊಮ್ಮೆ ಅಸತ್ಯವೆಂದು ಹೇಳುವುದಿಲ್ಲ ಆದರೆ ಚತುರತೆಯಿಂದ ನಡೆದುಕೊಳ್ಳಬೇಕಾಗುತ್ತದೆ ಎಂದು. ಚತುರತೆಯು ಏನಾಗಿದೆ? ಇದನ್ನಂತೂ ಮಾಡಲೇಬೇಕಾಗುತ್ತದೆ ಎಂದು ಸ್ಪಷ್ಟವಾಗಿ ಹೇಳುತ್ತಾರೆ. ಹಾಗೂ ಬ್ರಾಹ್ಮಣರು ರಾಯಲ್ ಭಾಷೆಯಲ್ಲಿ ಮಾತನಾಡುತ್ತಾರೆ. ಆಮೇಲೆ ಏನು ಹೇಳುತ್ತಾರೆಂದರೆ ನನ್ನ ಭಾವವು ಇದಾಗಿರಲಿಲ್ಲ, ಈ ಭಾವನೆಯು ಇರಲಿಲ್ಲ, ಭಾವವೂ ಇರಲಿಲ್ಲ ಆದರೆ ಮಾಡಲೇಬೇಕಾಗುತ್ತದೆ. ನಡೆದುಕೊಳ್ಳಲೇ ಬೇಕಾಗುತ್ತದೆ ಎಂದು ಹೇಳುತ್ತಾರೆ. ಆದರೆ ಬ್ರಹ್ಮಾಬಾಬಾರವರನ್ನು ನೋಡಿದಿರಿ. ಸಾಕಾರ ಆಗಿದ್ದರಲ್ಲವೇ ತಂದೆಯ ಬಗ್ಗೆಯಂತೂ ನೀವು ಏನು ಯೋಚಿಸುತ್ತೀರಿ? ಶಿವತಂದೆಯಂತೂ ನಿರಾಕಾರ ಆಗಿದ್ದಾರೆ. ಮೇಲೆ ಮಜಾದಿಂದ ಕುಳಿತುಕೊಂಡಿದ್ದಾರೆ. ಅವರು ಕೆಳಗೆ ಬಂದರೆ ಯಾವ ಪರಿಸ್ಥಿತಿ ಇದೆಯೆಂದು ಗೊತ್ತಾಗುತ್ತದೆ ಎಂದು ಯೋಚಿಸುತ್ತೀರಿ ಆದರೆ ಬ್ರಹ್ಮಾಬಾಬಾರವರಂತೂ ಸಾಕಾರ ಸ್ವರೂಪದಲ್ಲಿ ನಿಮ್ಮೆಲ್ಲರ ಜೊತೆಯಲ್ಲಿಯೇ ಇದ್ದರು. ವಿದ್ಯಾರ್ಥಿಯಾಗಿಯೂ ಇದ್ದರು ಹಾಗೂ ಅವರಿಗೆ ಸತ್ಯತೆಯ ಸಲುವಾಗಿ, ಪವಿತ್ರತೆಯ ಸಲುವಾಗಿ ಎಷ್ಟು ವಿರೋಧ ಪ್ರತಿಭಟನೆಯನ್ನು ಎದುರಿಸಬೇಕಾಯಿತು. ಆದರೆ ಅವರು ಚತುರತೆಯಿಂದ ನಡೆದುಕೊಂಡರೇ? ಪವಿತ್ರವಾಗಿರಬೇಬೇಕೆಂದು ನೀವು ಹೀಗೆ ನೇರವಾಗಿ ಹೇಳಬೇಡಿರಿ, ಸ್ವಲ್ಪ-ಸ್ವಲ್ಪ ಇರಿ ಎಂದು ಹೇಳಿರಿ ಎಂಬುದಾಗಿ ಅವರಿಗೆ ಜನರು ಎಷ್ಟು ಸಲಹೆಯನ್ನು ನೀಡಿದರು. ಆದರೆ ಬ್ರಹ್ಮಾಬಾಬಾರವರು ಗಾಬರಿಯಾದರೇ? ಸತ್ಯತೆಯ ಶಕ್ತಿಯನ್ನು ಧಾರಣೆ ಮಾಡುವುದರಲ್ಲಿ ಸಹನಶಕ್ತಿಯದೂ ಅವಶ್ಯಕತೆಯಿದೆ ಸಹನೆ ಮಾಡಬೇಕಾಗುತ್ತದೆ ಮಣಿಯಬೇಕಾಗುತ್ತದೆ. ಸೋಲು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಅದು ಸೋಲಲ್ಲ. ಆ ಸಮಯದಲ್ಲಿ ಸೋಲೆಂದು ಅನ್ನಿಸಬಹುದು, ಆದರೆ ಅದು ಸದಾಕಾಲ ವಿಜಯವಾಗಿದೆ.

ಸತ್ಯತೆಯ ಶಕ್ತಿಯಿಂದ ಈದಿನ ಡೈಮಂಡ್ ಜೂಬ್ಲಿಯನ್ನು ಆಚರಣೆ ಮಾಡುತ್ತಿದ್ದೇವೆ ಒಂದುವೇಳೆ ಪವಿತ್ರತೆ ಹಾಗೂ ಸತ್ಯತೆಯು ಇಲ್ಲದಿದ್ದರೆ. ಇಂದು ನಿಮ್ಮ ಚಹರೆಯಿಂದ ಚಲನೆ(ನಡವಳಿಕೆ)ಯಿಂದ ಬರುವವರಿಗೆ ಯಾವ ದಿವ್ಯತೆಯು ಅನುಭವವಾಗುತ್ತಿದೆಯೋ ಅದು ಆಗುತ್ತಿರಲಿಲ್ಲ. ಕಾಲ್ದಳದವರಾಗಿದ್ದರೂ ಆಗಿರಬಹುದು. ನಂಬರ್‌ವಾರ್ ಅಂತೂ ಇದ್ದಾರಲ್ಲದೇ ಮಹಾರಥಿಗಳೂ ಇದ್ದಾರೆ. ಹೆಸರಿಗೆ ಮಾತ್ರ ಮಹಾರಥಿಯಲ್ಲ ಆದರೆ ಯಾರು ಸತ್ಯವಾದ ಮಹಾರಥಿಯಾಗಿದ್ದಾರೆ ಅರ್ಥಾತ್- ಸತ್ಯತೆಯು ಶಕ್ತಿಯಿಂದ ನಡೆಯುವವರಾಗಿದ್ದಾರೋ ಅವರು ಮಹಾರಥಿಯಾಗಿದ್ದಾರೆ. ಪರಿಸ್ಥಿತಿಯನ್ನು ನೋಡಿ ಅಲ್ಪಸ್ವಲ್ಪವಾದರೂ ಸತ್ಯತೆಯಿಂದ ದೂರ ಸರಿದರೆ. ಅದು ಸಂಪೂರ್ಣ ಸತ್ಯತೆಯಲ್ಲಿ

ಉದಾಹರಣೆಗಾಗಿ ಬೇರೆ ಏನೂ ಮಾಡಲಿಲ್ಲ. ಒಂದೆರಡು ಶಬ್ದಗಳನ್ನು ಹೀಗೆ ತೋರಿಕೆಗಾಗಿ ಹೇಳಿಬಿಟ್ಟೆನು, ಮನಃಪೂರ್ವಕವಾಗಿ ಹೇಳಲಿಲ್ಲ ಎಂದು ಒಬ್ಬೊಬ್ಬರು ಹೇಳುತ್ತಾರೆ. ಅದು ಸಂಪೂರ್ಣ ಸತ್ಯತೆಯಾಗಲಿಲ್ಲ. ಸತ್ಯತೆಯ ಸಲುವಾಗಿ ಒಂದುವೇಳೆ ಸಹಿಸಬೇಕಾಗಿ ಬಂದರೆ ಅದು ಸಹನೆಯಲ್ಲ ವಾಕ್ಯದಿಂದ ನಾನು ಸಹನೆ ಮಾಡುತ್ತಾ ಇದ್ದೇನೆಂದೆನಿಸುತ್ತದೆ. ಆದರೆ ನಿಮ್ಮ ಖಾತೆಯಲ್ಲಿ ಅದು ಸಹನ ಶಕ್ತಿಯ ರೂಪದಲ್ಲಿ ಜಮಾ ಆಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆಯೆಂದರೆ, ಒಂದುವೇಳೆ ಯಾರಾದರೂ ಸಹನೆ ಮಾಡುವುದರಲ್ಲಿ  ದುರ್ಬಲರಾಗಿಬಿಟ್ಟರೂ ಅಸತ್ಯದ ಆಧಾರವನ್ನು ಅವಶ್ಯವಾಗಿ ತೆಗೆದು ಕೊಳ್ಳಬೇಕಾಗುತ್ತದೆ. ಆ ಸಮಯದಲ್ಲಿ ಹೇಗೆ ಅನ್ನಿಸುತ್ತದೆಯೆಂದರೆ, ಆಧಾರವು ಸಿಕ್ಕಿಬಿಟ್ಟಿತು. ಸರಿಯಾಗಿಬಿಟ್ಟಿತು ಎಂದು. ಆದರೆ ಅವರ ಖಾತೆಯಲ್ಲಿ ಸಹನ ಶಕ್ತಿಯು ಜಮಾ ಆಗುವುದಿಲ್ಲ. ನಾನು ತುಂಬಾ ಚೆನ್ನಾಗಿ ನಡೆದುಕೊಳ್ಳುತ್ತೇನೆ. ನನಗೆ ನಡೆದುಕೊಳ್ಳುವ ಚತುರತೆಯು  ಬಂದುಬಿಟ್ಟಿದೆ ಎಂದು ಬಾಹ್ಯದಿಂದ ತಿಳಿದುಕೊಳ್ಳುತ್ತಾರೆ. ಆದರೆ ಒಂದುವೇಳೆ ತಮ್ಮ ಖಾತೆಯನ್ನು ನೋಡಿಕೊಂಡರೆ ಜಮಾದ ಖಾತೆಯು ತುಂಬಾ ಕಡಿಮೆ ಇರುತ್ತದೆ. ಆದ್ದರಿಂದ ಚತುರತೆಯಿಂದ ನಡೆದುಕೊಳ್ಳಬೇಡಿರಿ. ಒಬ್ಬರನ್ನೊಬ್ಬರು ನೋಡಿಯೂ ಅನುಕರಣೆ ಮಾಡುತ್ತಾರೆ. *ಇವರು ಹೀಗೆ ಚತುರತೆಯಿಂದ ನಡೆದುಕೊಳ್ಳುವುದರಿಂದ ಇವರ ಹೆಸರು ತುಂಬಾ ಪ್ರಖ್ಯಾತವಾಗಿಬಿಟ್ಟಿದೆ. ಇವರು ತುಂಬಾ ಮುಂದೆ ಬಂದುಬಿಟ್ಟಿದ್ದಾರೆ. ಆದರೆ ನಾನು ಸತ್ಯವಂತನಾಗಿ ನಡೆದುಕೊಳ್ಳುವುದರಿಂದ ಹಿಂದೆಯೇ ಉಳಿದುಬಿಟ್ಟಿದ್ದೇನೆ ಎಂದು ಹಲವರು ತಿಳಿದುಕೊಳ್ಳುತ್ತಾರೆ. ಮುನ್ನಡೆಯುವುದಾಗಿದೆ. ಆದರೆ ಅದು ಹಿಂದೆ ಉಳಿಯುವುದಲ್ಲ, ತಂದೆಯ ಮುಂದೆ ನೀವು ಮುನ್ನಡೆಯುತ್ತೀರಿ ಆದರೆ ಅನ್ಯರ ಮುಂದೆ ನೀವು ಹಿಂದುಳಿದಿರುವಂತೆ ಕಂಡುಬಂದರೂ ಸಹ ನಿಮಗೆ ಯಾರಿಂದ ಕಾರ್ಯವಿದೆ. ಆತ್ಮರೊಂದಿಗೋ? ಯಾರೊಂದಿಗೆ ಕಾರ್ಯವಿದೆ' ತಂದೆಯೊಂದಿಗೋ? ಆದ್ದರಿಂದ ತಂದೆಯ ಹೃದಯದಲ್ಲಿ ಮುನ್ನಡೆಯುವುದು ಅರ್ಥಾತ್ ಇಡೀ ಕಲ್ಪದ ಪ್ರಾಲಬ್ಧದಲ್ಲಿ ಮುಂದೆ ಹೋಗುವುದಾಗಿದೆ. ಹಾಗೂ ಒಂದುವೇಳೆ ಇಲ್ಲ ಮುನ್ನಡೆಯುವುದರಲ್ಲಿ ಆತ್ಮರನ್ನು ಅನುಸರಿಸಬಹುದು. ಅದರಿಂದ ಆ ಸಮಯದಲ್ಲಿ ನಿಮ್ಮ ಹೆಸರನ್ನು ಪ್ರಶಂಸೆ ಮಾಡಬಹುದು ಕೀರ್ತಿಯು ದೊರೆಯುತ್ತದೆ. ಭಾಷಣ ಮಾಡುವವರ ಪಟ್ಟಿಯಲ್ಲಿ ಬರುತ್ತೀರಿ. ಸೇವಾಕೇಂದ್ರದ ಜವಾಬ್ದಾರಿ ನಿರ್ವಹಿಸುವವರ ಪಟ್ಟಿಯಲ್ಲಿ ಬರುತ್ತೀರಿ. ಆದರೆ ಈ ಸಮಯದವರೆಗೆ ಇಡೀ ಕಲ್ಪದ ಪ್ರಾಲಬ್ಧವು ರೂಪುಗೊಳ್ಳುವುದಿಲ್ಲ. ಅದನ್ನು ಬಾಪ್‌ದಾದಾರವರು ಏನೆಂದು ಕರೆಯುತ್ತೇವೆಂದರೆ ಶ್ರಮಪಟ್ಟು ಬೀಜ ಬಿತ್ತಿದಿರಿ, ವೃಕ್ಷವನ್ನು ಬೆಳೆಸಿದಿರಿ, ವೃಕ್ಷವು ಫಲವನ್ನೂ ಬಿಟ್ಟಿತು, ಆದರೆ ಕಚ್ಚಾಫಲವನ್ನು ತಿಂದುಬಿಟ್ಟಿರಿ, ಸದಾಕಾಲದವರೆಗೆ ಪ್ರಾಲಬ್ಧದ ಫಲವು ಸಮಾಪ್ತಿಯಾಗಿ ಬಿಡುತ್ತದೆ. ಆದ್ದರಿಂದ ಅಲ್ಪಕಾಲದ ಕೀರ್ತಿ, ಗೌರವ ಹೆಸರಿನ ಸಲುವಾಗಿ ಅನ್ಯರನ್ನು ಕಾಪಿ (ಅನುಕರಣೆ) ಮಾಡಬೇಡಿರಿ. ಇಲ್ಲಿ ನಿಮಗೆ ಹೆಸರು ಬರಲಿಲ್ಲ ಆದರೆ ತಂದೆಯ ಹೃದಯದಲ್ಲಿ ನಿಮ್ಮ ಹೆಸರು ಮುಂದೆ ಇದೆ. ಆದ್ದರಿಂದ ಡೈಮಂಡ್ (ವಜ್ರ) ಆಗಬೇಕೆಂದಿದ್ದರೆ ಇದೆಲ್ಲವನ್ನೂ ಪರಿಶೀಲನೆ ಮಾಡಿರಿ.* ಸ್ವಲ್ಪವೂ ರಾಯಲ್ ರೂಪದ ದೋಷವು ವಜ್ರದಲ್ಲಿ ಅಡಗಿಲ್ಲ ತಾನೇ? ಹೀಗೆ ಸತ್ಯತೆಯ ಶಕ್ತಿಯಿಂದ ದಿವ್ಯತೆಯನ್ನು ಧಾರಣೆ ಮಾಡಿರಿ. ಏನಾದರೂ ಸಹನೆ ಮಾಡಬೇಕಾಗಿ ಬಂದರೆ, ಗಾಬರಿಯಾಗಬೇಡಿರಿ. ಸತ್ಯವು ಸಮಯಾನುಸಾರವಾಗಿ ಸ್ವಯಂ ಸಿದ್ಧವಾಗುವುದು. "ಸತ್ಯದ ನಾವೆಯು ಅಲುಗಾಡುತ್ತದೆ ಆದರೆ ಮುಳುಗುವುದಿಲ್ಲ" ಎಂದು ಹೇಳಿಯೂ ಹೇಳುತ್ತೀರಲ್ಲವೇ, ಆದ್ದರಿಂದ ನಾವೆಯನ್ನು ಪಾರು ಮಾಡಿ ದಡ

ಮುಟ್ಟಿಸುವಿರಲ್ಲವೇ. ನಿರ್ಭಯರಾಗಿರಿ. ಒಂದುವೇಳೆ ಯಾವಾಗಲಾದರೂ ಪರಿಸ್ಥಿತಿ, ಸಮಸ್ಯೆಯನ್ನು ಎದುರಿಸಬೇಕಾಗಿ ಬಂದರೆ ಬ್ರಹ್ಮಾಬಾಬಾರ ಜೀವನವನ್ನು ಮುಂದೆ ಇಟ್ಟುಕೊಳ್ಳಿರಿ. ಬ್ರಹ್ಮಾಬಾಬಾರವರ ಮುಂದೆ ಪ್ರಪಂಚದ ಪರಿಸ್ಥಿತಿಗಳಂತೂ ಇದ್ದವು. ಆದರೆ ವಿವಿಧ ಬಗೆಯ ಮಕ್ಕಳ ಪರಿಸ್ಥಿತಿಗಳೂ ಇದ್ದವು ಆದರೆ ಸಂಘಟನೆಯಲ್ಲಿ ಇರುತ್ತಾ, ಜವಾಬ್ದಾರಿಯು ಇದ್ದರೂ ಸತ್ಯತೆಯ ಶಕ್ತಿಯಿಂದ ವಿಜಯಶಾಲಿಯಾಗಿ ಬಿಟ್ಟರು. ಮಕ್ಕಳ ತುಂಟಾಟವನ್ನು ಬ್ರಹ್ಮಾಬಾಬಾರವರು ನೋಡಲಿಲ್ಲವೇ? ಬ್ರಹ್ಮಾಬಾಬಾರವರ ಮುಂದೆಯೂ ವಿವಿಧ ಸಂಸ್ಕಾರಗಳುಳ್ಳ ಆತ್ಮರು ಇದ್ದರು. ಆದರೆ ಇಷ್ಟೆಲ್ಲಾ ಪರಿಸ್ಥಿತಿಗಳು ಇದ್ದರೂ ಸತ್ಯತೆಯ ಸ್ವಸ್ಥಿತಿಯು ಸಂಪೂರ್ಣ ಮಾಡಿಬಿಟ್ಟಿತು. ನೀವೆಲ್ಲರೂ ಏನಾಗಬೇಕಾಗಿದೆ? ಚತುರತೆಯಂತೂ ಇಲ್ಲ ತಾನೇ. ಮಕ್ಕಳು ತುಂಬಾ ಚೆನ್ನಾಗಿ ವರ್ಣನೆ ಮಾಡುತ್ತಾರೆ. ನಾನು ಏನೂ ಮಾಡಲಿಲ್ಲ, ಸ್ವಲ್ಪ ಚತುರತೆಯಿಂದ ನಡೆದುಕೊಳ್ಳಲೇಬೇಕಾಗುತ್ತದೆ ಎಂದು ಹೇಳುತ್ತಾರೆ. ಆದರೆ ಎಲ್ಲಿಯವರೆಗೆ? ಆದ್ದರಿಂದ ಸಹನಶಕ್ತಿಯನ್ನು ಧಾರಣೆ ಮಾಡಿ ಅಸತ್ಯವನ್ನು ಎದುರಿಸಿ ಹೋರಾಡಿರಿ. ಪ್ರಭಾವದಲ್ಲಿ ಬಂದು ಬಿಡಬೇಡಿರಿ. *ಅನೇಕರು ಏನು ತಿಳಿದುಕೊಂಡಿದ್ದಾರೆಂದರೆ, ನಾವು ಮಹಾರಥಿಗಳಲ್ಲಿಯೂ ಹೀಗೆ ನೋಡಿದ್ದೇವಲ್ಲವೇ. ಮಹಾರಥಿಗಳನ್ನು ಅನುಸರಿಸಬೇಕಲ್ಲವೇ ಎಂದು ಭಾವಿಸುತ್ತಾರೆ. ಈಗಂತೂ ಬ್ರಹ್ಮಾಬಾಬಾರವರು ಎದುರುಗಡೆ ಇಲ್ಲ ಮಹಾರಥಿಗಳು ಎದುರುಗಡೆ ಇರುವುದರಿಂದ ಅವರನ್ನು ಅನುಸರಿಸಿದೆನು ಎಂದು ಹೇಳುತ್ತಾರೆ ಆದರೆ ಒಂದುವೇಳೆ ಮಹಾರಥಿಯೂ ಸಹ ಸತ್ಯತೆಯಲ್ಲಿ ಬೆರಕೆ ಮಾಡಿದರೆ, ಚತುರತೆಯಿಂದ ನಡೆದುಕೊಂಡರೆ, ಆ ಸಮಯದಲ್ಲಿ ಮಹಾರಥಿಯು ಮಹಾರಥಿಯಲ್ಲ, ಆ ಸಮಯದಲ್ಲಿ ಗ್ರಹಚಾರದಲ್ಲಿ ಇರುತ್ತಾರೆಯೇ ಹೊರತು ಮಹಾರಥಿ ಆಗಿರುವುದಿಲ್ಲ ಆದ್ದರಿಂದ ತಂದೆಯು ಯಾವ ಸ್ಲೋಗನ್ ಕೊಟ್ಟಿದ್ದಾರೆ ಫಾಲೋ ಫಾದರ್ (ತಂದೆಯನ್ನು ಅನುಸರಿಲಸಿರಿ) ಎಂದೋ ಅಥವಾ ಫಾಲೋ ಸಿಸ್ಟರ್, ಬ್ರದರ್ ಎಂಬ ಸ್ಲೋಗನ್ ಕೊಡಲ್ಪಟ್ಟಿದೆಯೋ? ಆದ್ದರಿಂದ ಸಾಕಾರ ಕರ್ಮದಲ್ಲಿ ಬ್ರಹ್ಮಾಬಾಬಾರವರನ್ನು ಮುಂದೆ ಇಟ್ಟುಕೊಳ್ಳಿರಿ. ಅನುಸರಿಸಿರಿ.* ಒಳ್ಳೊಳ್ಳೆಯ ಮಕ್ಕಳೂ ಇದ್ದಾರೆ. ಆದರೆ ಅವರೂ ಸಹ ತಂದೆಯನ್ನು ಅನುಸರಿತ್ತಾರೆ. ಹಾಗಾದರೆ ನೀವು ಏನು ಮಾಡಬೇಕಾಗಿದೆ? ಫಾಲೋ ಫಾದರ್ (ತಂದೆಯನ್ನು ಅನುಕರಣೆ ಮಾಡುವುದೇ)? ಪಕ್ಕಾ ಮಾಡಿಕೊಂಡಿದ್ದೀರಾ? ಅಥವಾ ಅಲ್ಪ ಸ್ವಲ್ಪ ಸೌಕರ್ಯವು ದೊರೆಯುವುದಾದರೆ ಅದನ್ನು ತೆಗೆದುಕೊಂಡು ಬಿಡೋಣ ಭವಿಷ್ಯದಲ್ಲಿ ನೋಡಿಕೊಳ್ಳೋಣ ಎಂದು ಯೋಚಿಸುತ್ತೀರೋ? ಅನೇಕರು ಏನು ಯೋಚಿಸುತ್ತಾರೆಂದರೆ, ಸತ್ಯಯುಗದಲ್ಲಿ ಕಡಿಮೆ ಪದವಿ ಪಡೆಯಬಹುದೇನೋ. ಆದರೆ ಸುಖಿಯಂತೂ ಆಗಿಯೇ ಇರುವೆನು ಎಂದು ತಿಳಿದುಕೊಳ್ಳುತ್ತಾರೆ. ದುಃಖವಂತೂ ಇರುವುದೇ ಇಲ್ಲವೆಂದು ಭಾವಿಸುತ್ತಾರೆ. ಎಲ್ಲಾ ಪ್ರಾಪ್ತಿಗಳಂತೂ ಇರುವವು. ಪ್ರಜೆಯಾದರೂ ಸಹ ಅಪ್ರಾಪ್ತಿಯಂತೂ ಇರುವುದಿಲ್ಲವಾದ್ದರಿಂದ ಈಗಂತೂ ಸುಖವನ್ನು ಅನುಭವಿಸಿಬಿಡೋಣ. ಆಮೇಲೆ ನೋಡಿಕೊಳ್ಳೋಣ ಎಂದು ಯೋಚಿಸುತ್ತಾರೆ ಆದರೆ ಈ ಅಲ್ಪಕಾಲದ ಮೋಜು ಶಿಕ್ಷೆಯ ಭಾಗಿದಾರರನ್ನಾಗಿ ಮಾಡಿಬಿಡುವುದು, ಅದು ನಿಮಗೆ ಇಷ್ಟವಿದೆಯೇ ಸ್ವಲ್ಪ ಶಿಕ್ಷೆಯನ್ನು ಭೋಗಿಸುವಿರಾ, ಆ ಮೋಜನ್ನೂ ಅನುಭವ ಮಾಡಿರುವಿರೋ ಅಥವಾ ಇಲ್ಲವೋ?

ಆದ್ದರಿಂದ ಈ ಮೂರು ಶಬ್ದಗಳನ್ನು ನೆನಪಿಟ್ಟುಕೊಳ್ಳಿರಿ - ಪವಿತ್ರತೆ, ಸತ್ಯತೆ ಹಾಗೂ ದಿವ್ಯತೆ ಸಾಧಾರಣ ನುಡಿಯಾಗಬಾರದು, ಸಾಧಾರಣ ಸಂಕಲ್ಪವಾಗಬಾರದು, ಸಾಧಾರಣ ಕರ್ಮವಾಗಬಾರದು, ಎಲ್ಲದರಲ್ಲಿಯೂ ದಿವ್ಯತೆಯಿರಬೇಕು. ದಿವ್ಯತೆಯ ಅರ್ಥವೇ ಏನಾಗಿದೆಯೆಂದರೆ ದಿವ್ಯಗುಣದ ಮೂಲಕ ಕರ್ಮವನ್ನು ಮಾಡುವುದು. ಸಂಕಲ್ಪವನ್ನು ಮಾಡುವುದೇ ದಿವ್ಯತೆಯಾಗಿದೆ. ಹೇಗೆ ಪಾಪಕರ್ಮವೆಂದರೆ ಯಾವುದು ಎಂದು ಯಾರಾದರೂ ಕೇಳಿದರೆ, ನೀವು ಏನು ಹೇಳುತ್ತೀರಿ' ಯಾವುದಾದರೂ ವಿಕಾರದ ವಶವಾಗಿ ಕರ್ಮ ಮಾಡುವುದೇ ಪಾಪಕರ್ಮವಾಗಿದೆಯೆಂದು ಹೇಳುತ್ತೀರಲ್ಲವೇ. ಹೀಗೆ ತಿಳಿಸಿಕೊಡುತ್ತೀರಲ್ಲವೇ ಹಾಗೆಯೇ ದಿವ್ಯತೆ ಅರ್ಥಾತ್ ದಿವ್ಯಗುಣದ ಆಧಾರದಿಂದ ಸಂಕಲ್ಪ, ನುಡಿ ಹಾಗೂ ಕರ್ಮವನ್ನು ಮಾಡುವುದು, ಹೀಗೆ ಸತ್ಯತೆಯ ಮಹತ್ವವನ್ನು ತಿಳಿದುಕೊಂಡಿದ್ದೀರಾ? (ವ್ಯಾಯಾಮ) ಒಂದು ಸೆಕೆಂಡಿನಲ್ಲಿ ನಿಮ್ಮನ್ನು ಅಶರೀರಿಯನ್ನಾಗಿ ಮಾಡಿಕೊಳ್ಳಬಲ್ಲಿರಾ? ನಾನು ಅಶರೀರೀ ಆತ್ಮನಾಗಿದ್ದೇನೆ ಎನ್ನುವ ಸಂಕಲ್ಪವನ್ನು ಮಾಡುವುದಕ್ಕೆ ಎಷ್ಟು ಸಮಯ ಹಿಡಿಯುತ್ತದೆ? ಒಂದು ಸೆಕೆಂಡ್ ಹಿಡಿಯುತ್ತದೆಯಲ್ಲವೇ. ಹೀಗೆ ಒಂದು ಸೆಕೆಂಡಿನಲ್ಲಿ ಅಶರೀರಿ ಅರ್ಥಾತ್ ಶರೀರದಿಂದ ಅತೀತ ಹಾಗೂ ತಂದೆಗೆ ಪ್ರಿಯರಾಗುವ ಡ್ರಿಲ್ ಇಡೀ ದಿನದಲ್ಲಿ ಮಧ್ಯ ಮಧ್ಯ ಮಾಡುತ್ತಾ ಇರಿ. ಮಾಡುವುದಂತೂ ಬರುತ್ತದೆಯಲ್ಲವೇ? ಹಾಗಾದರೆ ಈಗಲೇ ಎಲ್ಲರೂ ಒಂದು ಸೆಕೆಂಡಿನಲ್ಲಿ ಎಲ್ಲವನ್ನೂ ಮರೆತು ಒಮ್ಮೆಲೆಯೇ ಅಶರೀರಿಯಾಗಿ ಬಿಡಿ. (ಬಾಪ್‌ದಾದಾರವರು ಐದು ನಿಮಿಷ ಡ್ರಿಲ್ ಮಾಡಿಸಿದರು) ಒಳ್ಳೆಯದು.

**ನಾಲ್ಕೂ ಕಡೆಯ ಸರ್ವ ಪವಿತ್ರತೆಯ ಫೌಂಡೇಷನ್‌ನ್ನು ಸದಾ ಸುಭದ್ರವಾಗಿ ಇಟ್ಟುಕೊಂಡಿರುವ ಸದಾ ಸತ್ಯತೆಯ ಶಕ್ತಿಯಿಂದ ವಿಶ್ವದಲ್ಲಿಯೂ ಸತ್ಯಯುಗ ಅರ್ಥಾತ್ ಸತ್ಯತೆಯ ಶಕ್ತಿಯ ವೈಬ್ರೇಷನ್ಸ್ (ತರಂಗಗಳನ್ನು) ವ್ಯಾಪಿಸುವ, ಸದಾ ಪ್ರತಿಯೊಂದು ಸಮಯದಲ್ಲಿಯೂ ಮನ-ವಚನ- ಕರ್ಮ ಇವು ಮೂರರಲ್ಲಿಯೂ ದಿವ್ಯತೆಯನ್ನು ಧಾರಣೆ ಮಾಡುವ, ಸದಾ ಫಾಲೋ ಫಾದರ್ (ತಂದೆಯನ್ನು ಅನುಕರಣೆ) ಮಾಡುವ ಸ್ವಾಭಾವಿಕ ಅಭ್ಯಾಸವಿರುವ ಆತ್ಮರಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

ಈ ಡ್ರಿಲ್ಲನ್ನು ದಿನದಲ್ಲಿ ಎಷ್ಟು ಸಲ ಮಾಡಲು ಸಾಧ್ಯವಿದೆಯೋ ಅಷ್ಟೂ ಸಲ ಮಾಡುತ್ತಾ ಇರಿ. ಒಂದು ನಿಮಿಷಕ್ಕೆ ದೊರೆತರೂ ಈ ಡ್ರಿಲ್ ಮಾಡಿರಿ. ಮೂರು ನಿಮಿಷ. ಎರಡು ನಿಮಿಷದ ಬಿಡುವು ಇಲ್ಲದಿದ್ದರೂ ಒಂದು ನಿಮಿಷ ಎರಡು ನಿಮಿಷದ ಬಿಡುವು ಇಲ್ಲದಿದ್ದರೂ ಒಂದು ನಿಮಿಷ ಅರ್ಧ ನಿಮಿಷವಾದರೂ ಈ ಉಭ್ಯಾಸ ಮಾಡುವುದರಿಂದ ಅಂತ್ಯ ಸಮಯದಲ್ಲಿ ತುಂಬಾ ನೆರವು ದೊರೆಯುವುದು, ಆಗಬಲ್ಲಿರಾ ಈಗ ಎಲ್ಲರೂ ಅಶರೀರಿಯಾದಿರೋ ಅಥವಾ ಯುದ್ಧ ಮಾಡುವುದರಲ್ಲಿ ಸಮಯವು ಕಳೆದುಹೋಯಿತೋ? ಅಶರೀರಿಯಾದಿರಾ? ಅಥವಾ ಶ್ರಮಪಡುತ್ತಾ, ಶ್ರಮಪಡುತ್ತಾ ಸಮಯವು ಪೂರ್ತಿಯಾಗಿ ಬಿಟ್ಟಿತೋ? ಒಂದು ಸೆಕೆಂಡಿನಲ್ಲಿ ಆಗಬಲ್ಲಿರಾ? ತುಂಬಾ ಕೆಲಸ ಕಾರ್ಯವಿದ್ದರೂ ಸಹ ಆಗಬಲ್ಲಿರಾ? ಕಷ್ಟವಿಲ್ಲವೇ? ಕಷ್ಟವಿದೆಯೇ? ಯು.ಎನ್. (ಯುನೈಟೆಡ್ ನೇಷನ್ಸ್ - ಸಂಯುಕ್ತ ರಾಷ್ಟ್ರಸಂಸ್ಥೆ)ನಲ್ಲಿ ತುಂಬಾ ಕಾರ್ಯದಲ್ಲಿ ಓಡಾಡುತ್ತಿರುವಾಗ ಅಶರೀರಿಯಾಗಲು ಪ್ರಯತ್ನ ಮಾಡಿದರೆ ಆಗುವುದೇನು? ಒಂದುವೇಳೆ ಈ ಅಭ್ಯಾಸವನ್ನು ಸಮಯ ಪ್ರತಿಸಮಯ ಮಾಡುತ್ತಿದ್ದರೆ ಹೇಗೆ ಸ್ವಾಭಾವಿಕವಾಗಿ ಬಿಡುವುದೆಂದರೆ ಹೇಗೆ ದೇಹ

ಅಭಿಮಾನದಲ್ಲಿ ಬರುವುದಕ್ಕೆ ಶ್ರಮಪಡುತ್ತೀರೇ? ನಾನು ಇಂತಹವಳಾಗಿದ್ದೇನೆ ಎಂದು ಸ್ಮೃತಿ ಸ್ವರೂಪ ಆಗಲು ಶ್ರಮಪಡುತ್ತೀರಾ. ಸ್ವಾಭಾವಿಕವಾಗಿದೆ. ಹಾಗೆಯೇ ಇದೂ ಸಹ ಸ್ವಾಭಾವಿಕ ಆಗಿಬಿಡುವುದು. ಯಾವಾಗ ಬಯಸಿದರೆ ಆಗ ಅಶರೀರಿಯಾಗಿ ಬಿಡಿ ಯಾವಾಗ ಬೇಕೋ ಆಗ ಶರೀರದಲ್ಲಿ ಬನ್ನಿರಿ, ಕೆಲಸಕಾರ್ಯವಿದ್ದರೆ ಶರೀರದಲ್ಲಿ ಬನ್ನಿರಿ. ಈ ಶರೀರದ ಆಧಾರವನ್ನು ತೆಗೆದುಕೊಳ್ಳಿರಿ. ಆದರೆ ಆಧಾರವನ್ನು ತೆಗೆದುಕೊಳ್ಳುವವನು ನಾನು ಆತ್ಮನಾಗಿದ್ದೇನೆ ಎಂಬುದನ್ನು ಮರೆಯಬೇಡಿರಿ. ಮಾಡುವವನಲ್ಲ. ಮಾಡಿಸುವವನಾಗಿದ್ದೇನೆ. ಮಾಲಿಕನಾಗಿದ್ದೇನೆ ಎನ್ನುವ ಸ್ಥಿತಿಯಿರಲಿ ಹೇಗೆ ಅನ್ಯರಿಂದ ಕೆಲಸ ಮಾಡಿಸುತ್ತೀರಲ್ಲವೇ. ಆ ಸಮಯದಲ್ಲಿ ನಿಮ್ಮನ್ನು ಕರ್ಮಚಾರಿಗಿಂತಲೂ ಬೇರೆ ಆಗಿದ್ದೇನೆ ಎಂದು ತಿಳಿದುಕೊಳ್ಳುತ್ತೀರಲ್ಲವೇ. ಹಾಗೆಯೇ ಶರೀರದಿಂದ ಕೆಲಸ ಮಾಡಿಸುತ್ತಿದ್ದರೂ ಮಾಡಿಸುವ ಆತ್ಮನು ನಾನು ಶರೀರದಿಂದ ಬೇರೆ ಆಗಿದ್ದೇನೆ ಎಂದು ತಿಳಿದುಕೊಳ್ಳಿರಿ. ಈ ಅಭ್ಯಾಸ ಮಾಡಿದರೆ, ಎಂದೂ ದೇಹಾಭಿಮಾನದ ಮಾತುಗಳಲ್ಲಿ ಏರುಪೇರು ಆಗುವುದಿಲ್ಲ. ತಿಳಿಯಿತೇ

ಡಬಲ್ ವಿದೇಶೀಯರು ಮುಂದೆ ಹೋಗಲು ಬಯಸುತ್ತೀರಲ್ಲವೇ. ಉತ್ತಮರಾಗಿದ್ದಾರೆ. ಗಮನವು ಚೆನ್ನಾಗಿದೆ. ಸೇವೆಯಲ್ಲಿಯೂ ಅಕ್ಕರೆ. ಉತ್ಸಾಹವು ಚೆನ್ನಾಗಿದೆ. ಇನ್ನೂ ಅಧಿಕವಾಗುತ್ತಾ ಇರುವುದು. ಡಬಲ್ ವಿದೇಶೀಯರೊಂದಿಗೆ ಕೇಳುತ್ತಾ ಇದ್ದೇವೆ - ಎಲ್ಲರೂ ಈ ವರ್ಷ ಏನು ಸೇವೆ ಮಾಡಿದ್ದಿರೋ, ಯಾವ ಪ್ರಾಜೆಕ್ಟ್ (ಯೋಜನೆ) ದೊರೆಯಿತೋ ಅದರಲ್ಲಿ ಸಂತುಷ್ಟರಾಗಿದ್ದೀರಾ? ಸೇವೆಯಲ್ಲಿ ಸಂತುಷ್ಟರಾಗಿದ್ದಿರಲ್ಲವೇ? ಎಲ್ಲರೂ ಪ್ರೋಗ್ರಾಂ ಮಾಡಿದರಲ್ಲವೇ? ಅದರಿಂದ ಸಂತುಷ್ಟರಾಗಿದ್ದೀರಾ? ಹೌದು ಅಥವಾ ಇಲ್ಲ ಎಂದು ಹೇಳಿರಿ. ಯಾವುದಾದರೂ ಸೇವೆ ಮಾಡಿರಿ. ಕೋರ್ಸಿಗೆ ಜಿಜ್ಞಾಸುಗಳು (ಸಾಪ್ತಾಹಿಕ ಪಠ್ಯಕ್ರಮಕ್ಕೆ) ಬರಲಿ ಅಥವಾ ಬಿಡಲಿ ಆದರೆ ಸ್ವಯಂ ನೀವು ಸ್ವಯಂನೊಂದಿಗೆ ಸಂತುಷ್ಟರಾಗಿ ಇರಿ. ಒಂದುವೇಳೆ ನಾನು ಸಂತುಷ್ಟನಾಗಿದ್ದರೆ, ಇಂದಲ್ಲದಿದ್ದರೆ ನಾಳೆಯಾದರೂ ಈ ಸಂದೇಶವು ಕೆಲಸ ಮಾಡುವುದು. ಮಾಡಿಯೇ ಮಾಡಲಿದೆ ಎನ್ನುವ ನಿಶ್ಚಯವನ್ನು ಇಟ್ಟುಕೊಳ್ಳಿರಿ. ಇದರಲ್ಲಿ ಅತ್ಯಲ್ಪವೂ ಉದಾಸರಾಗಬೇಡಿರಿ. ಖರ್ಚೇನೋ ಮಾಡಿದೆವು. ಪ್ರೋಗ್ರಾಂ (ಕಾರ್ಯಕ್ರಮ) ಸಹ ಮಾಡಿದೆವು ಆದರೆ ಯಾರೂ ಬರಲಿಲ್ಲ. ವಿದ್ಯಾರ್ಥಿಗಳ ಸಂಖ್ಯೆಯು ವೃದ್ಧಿಯಾಗಲಿಲ್ಲ ಎಂದು ಬೇಸರಗೊಳ್ಳಬೇಡಿರಿ. ಯಾವ ಅಡ್ಡಿಯೂ ಇಲ್ಲ.  ನೀವಂತೂ ನಿಮ್ಮ ಕರ್ತವ್ಯ ಮಾಡಿದಿರಲ್ಲವೇ, ನಿಮ್ಮ ಲೆಕ್ಕಾಚಾರದಲ್ಲಿ ಜಮಾ ಆಗಿಬಿಟ್ಟಿತು. ಅವರಿಗೂ ಸಹ ಸಂದೇಶ ಸಿಕ್ಕಿಬಿಟ್ಟಿತು. ಆದ್ದರಿಂದ ಸಮಯ ಬಂದಾಗ ಎಲ್ಲರೂ ಬಂದೇ ಬರುತ್ತಾರೆ. ಆದ್ದರಿಂದ ಮಾಡುತ್ತಾ ಹೋಗಿರಿ. ತುಂಬಾ ಖರ್ಚು ಮಾಡಿದ್ದು ಸಫಲವಾಯಿತು. ಎಂದು ಗಾಬರಿಯಾಗಬೇಡಿರಿ. ಏನಾಯಿತೋ ಗೊತ್ತಿಲ್ಲ ನನ್ನ ಯೋಗವು ಸರಿಯಾಗಿರಲಿಲ್ಲ ಆದ್ದರಿಂದಲೇ ಹೀಗಾಯಿತು ಎಂದು ಅನೇಕ ಮಕ್ಕಳು ಹೇಳುತ್ತಾರೆ. ಯಾರೊಂದಿಗೆ ಯೋಗವಿತ್ತು? ಯಾರೊಂದಿಗೆ ಯೋಗವಿತ್ತೋ? ಆ ಅನ್ಯರು ಯಾರಾದರೂ ಇದ್ದಾರೇನು? ಯೋಗವಿದೆ. ಹಾಗೂ ಸದಾ ಇರುವುದು. ಆದರೆ ಒಂದೊಂದು ಸೀಜನ್ನಿನ ಫಲ (ಹಣ್ಣು) ಇದೆ. ಒಂದೊಂದು ಪ್ರತಿಯೊಂದು ಸಮಯದ ಫಲ ಇದೆ. ಒಂದುವೇಳೆ ಯಾರೂ ಬರದಿದ್ದರೆ ಸೀಜನ್ನಿನ ಫಲವಾಗಿದೆ, ಆ ಸೀಜನ್ ನಲ್ಲಿ  ಬರುವರು ಎಂದು ತಿಳಿದುಕೊಳ್ಳಿರಿ. ನಿರಾಶರಾಗಬೇಡಿರಿ. ಏಕೆಂದರೆ ಶ್ರೀಮತವನ್ನಂತೂ ಪಾಲನೆ ಮಾಡಿದಿರಲ್ಲವೇ. ಶ್ರೀಮತದ ಅನುಸಾರವಾಗಿ ಕಾರ್ಯವನ್ನು ಮಾಡಿದಿರಿ. ಆದ್ದರಿಂದ ಶ್ರೀಮತವನ್ನು ಪಾಲನೆ

ಮಾಡುವುದೂ ಸಹ ಒಂದು ಸಫಲತೆಯಾಗಿದೆ. ಪ್ರಗತಿ ಹೊಂದುತ್ತಾ ಹೋಗಿರಿ. ಕಾರ್ಯವನ್ನು ಮಾಡುತ್ತಾ ಹೋಗಿರಿ. ನೀವು ಹೇಳಿದಿರಿ. ನಾವು ನಂಬಲಿಲ್ಲ ಎಂದು ಜನರು ಪಶ್ಚಾತ್ತಾಪ ಪಟ್ಟು ನಿಮ್ಮ ಕಾಲಿಗೆ ಬೀಳುವರು. ಇಲ್ಲಿಯೇ ನೀವು ದೇವಿಯರಾಗುವಿರಿ. ನಿಮ್ಮ ಕಾಲಿಗೆರಗುವರು. ಆದ್ದರಿಂದಲೇ ಭಕ್ತಿಯಲ್ಲಿಯೂ ಕಾಲಿಗೆರಗುತ್ತಾರಲ್ಲವೇ. ನೀವು ನಮ್ಮ ಕಲ್ಯಾಣವನ್ನು ಎಷ್ಟೊಂದು ಮಾಡಿದಿರಿ ಎಂದು ನಿಮ್ಮ ಕಾಲಿಗೆ ಬೀಳುವ ಸಮಯವೂ ಬರಲಿದೆ. ಈಗಂತೂ ಐ.ಪಿ.ಗಳನ್ನೂ (ಮುಖ್ಯ ವ್ಯಕ್ತಿಗಳನ್ನೂ) ಒಳೊಳ್ಳೆಯವರನ್ನೂ ಕರೆತರುತ್ತಲೇ ಇರುತ್ತೀರಿ. ಬಾಪ್ ದಾದಾರ ಬಳಿಯಂತೂ ಫಲಿತಾಂಶವು ಬಂದೇ ಬರುತ್ತದೆ. ಹೀಗೆ ಒಳೊಳ್ಳೆಯ ವಿ.ಐ.ಪಿ. (ಪ್ರಮುಖ ವ್ಯಕ್ತಿಗಳನ್ನು) ಐ.ಪಿ.ಗಳನ್ನೂ ಕರೆತಂದಿರಿ ಎನ್ನುವುದೂ ಸಫಲತೆಯಾಯಿತು. ಮುಂಚೆಯೂ ಸಹ ಮಕ್ಕಳ ಪ್ರೋಗ್ರಾಂ ಸಹ ಮಾಡಿದಿರಲ್ಲವೇ. ಮಕ್ಕಳಲ್ಲಿ ವಿದೇಶದ ಮಕ್ಕಳು ಎಷ್ಟಿದ್ದರು? ಒಂದು ನೂರು (100) ವಿದೇಶದವರಿದ್ದರು ಹಾಗೂ ಈಗ ಮಹಿಳೆಯರ ಪ್ರೋಗ್ರಾಂ ಮಾಡುತ್ತಾ ಇದ್ದೀರಿ. ತಯಾರಿಯನ್ನೂ ಮಾಡುತ್ತಾ ಇದ್ದೀರಿ. ಹೀಗೆ ಮುನ್ನಡೆಯುತ್ತಾ ಇದ್ದೀರಲ್ಲವೇ? ಮುಂಚೆ ಐ.ಪಿ.ಗಳನ್ನು ಕರೆದುಕೊಂಡು ಬನ್ನಿರೆಂದು ಹೇಳಿದರೆ ವಿದೇಶದಿಂದ ಕರೆತರುವುದು ತುಂಬಾ ಕಷ್ಟವಿದೆ, ತುಂಬಾ ಕಷ್ಟವಿದೆ ಎಂದು ಹೇಳುತ್ತಿದ್ದೀರಿ. ಹೀಗೆ ಈ ಮಗಳು ಜಯಂತಿಯೂ ಹೇಳುತ್ತಿದ್ದಳು. ಈಗ ಹಾಗೂ ಇದು ಡೈಮಂಡ್ ಜೂಬ್ಲಿಯಾಗಿರುವುದರಿಂದ ಭಾರತದಲ್ಲಿಯೂ ಎಲ್ಲಾ ಕಡೆ ತುಂಬಾ ಸಫಲ ಆಗಿವೆ. ಏಕೆಂದರೆ ಡೈಮಂಡ್ ಜೂಬ್ಲಿಯ ವಿಧಿಯನ್ನು ಏನು ಇಟ್ಟುಕೊಂಡಿದ್ದೀರೋ ಡೈಮಂಡ್ ಜುಬಿಲಿಯ ಕಾರಣ ಎಲ್ಲರೂ ದೀಪವನ್ನು ಹಚ್ಚಲು ಬರಬೇಕು ಎಂದು ಇದರಿಂದ ತಮಗೆ ಏನೋ ಸ್ಥಾನವು ಸಿಕ್ಕಿತೆಂದು ಅವರು ತಿಳಿದುಕೊಳ್ಳುತ್ತಾರೆ. ಸುಮ್ಮನೆ ಕರೆದರೆ ಬರುವುದಿಲ್ಲ. ಹೀಗೆ ಡೈಮಂಡ್ ಜೂಬ್ಲಿಯ ವಿಧಿಯ ಕಾರಣ ಈಗ ಐ.ಪಿ.ಗಳು ಸಂಪರ್ಕದಲ್ಲಿ ಚೆನ್ನಾಗಿ ಬಂದಿದ್ದಾರೆ ಹಾಗೂ ಬರುತ್ತಾ ಇರುತ್ತಾರೆ. ಏಕೆಂದರೆ ಅಜ್ಞಾನಿ ಯಾಗಿದ್ದಾರಲ್ಲವೇ. ಆದ್ದರಿಂದ ಕೇವಲ ಕೇಳಲು ಹೋಗಬೇಕೆಂದು ದೇಹಾಭಿಮಾನವು ಬರುತ್ತದೆ. ಆದರೆ ತಾವು ಏನಾದರೂ ಮಾಡಬೇಕಾದರೆ ಸ್ಥಾನವನ್ನು ಕೊಟ್ಟರೆಂದು ತಿಳಿದುಕೊಳ್ಳುತ್ತಾರೆ. ಯಾರಿಗೆ ಏನು ಬೇಕಾಗಿದೆಯೋ ಅದನ್ನು ಕೊಟ್ಟುಬಿಟ್ಟರೆ ನಿಮ್ಮ ಕಾರ್ಯವು ಆಗಿಬಿಡುತ್ತದೆ. ಹೀಗೆ ದೀಪ ಹಚ್ಚುವುದರಲ್ಲಿ ಏನು ದೊಡ್ಡಸ್ತಿಕೆಯಿದೆ. ವಿಚಾರ ಮಾಡಿದರೆ ಅದರಲ್ಲಿ ಏನಿದೆ? ಆದರೆ ಅವರು ಖುಷಿಯಾಗಿ ಬಿಡುತ್ತಾರೆ. ನಮಗೆ ಗೌರವ ಕೊಟ್ಟರೆಂದು ತಿಳಿದುಕೊಳ್ಳುತ್ತಾರೆ. ದೇಶವಿದೇಶಗಳಲ್ಲಿ ಚೆನ್ನಾಗಿ ಡೈಮಂಡ್ ಜೂಬ್ಲಿಯ ಸೇವೆ ಮಾಡುತ್ತಾರೆ ಒಳ್ಳೆಯದು - ಏನು ಹೇಳುತ್ತಾರೆ? ಸಹಜವಾಗಿ ಕರೆತರಬಹುದು ಎಂದು ಹೇಳುತ್ತಾಳೆ. ಅದರಿಂದ ತಮಗೆ ಅದು ಸಫಲವಾಗಿದೆ ಹಾಗೂ ಸಫಲವಾಗುತ್ತಾ ಇರುವುದು.

ಸೇವೆಯನ್ನು ಯಾರು ಯಾರು ಮಾಡಲಿದ್ದಾರೋ ಅವರು ಕೈ ಎತ್ತಿರಿ. ಮಹಿಳೆಯರ ಸೇವೆಗೆ ನಿಮಿತ್ತರು ಯಾರು ಯಾರು ಇದ್ದಾರೆ? ಹಾಗೂ ಪಾಂಡವರು ಯಾರಿದ್ದಾರೆ? (ಯಾರೂ ಇಲ್ಲ) ಸೇವೆಯಲ್ಲಿಯೂ ಪಾಂಡವರಿಗೆ ಭಾಗವಹಿಸಲು ಅನುಮತಿ ಇಲ್ಲವೇ. ಒಳ್ಳೆಯದು ಇದರಲ್ಲಿಯಾದರೂ ಶಕ್ತಿಯರು ಶೂರವೀರರಾದರು. ಎಂದೆನಿಸುತ್ತದೆಯಲ್ಲವೇ? ಸುಸ್ತಾಗುವುದಿಲ್ಲ ತಾನೇ? ಬಳಲಿ ಹೋಗುತ್ತೀರಾ? ಸೇವೆ ಮಾಡುವುದು ಒಳ್ಳೆಯದನಿಸುತ್ತದೆ ಅಲ್ಲವೇ? ಸುಸ್ತಾಗುವುದಿಲ್ಲ ತಾನೇ? ಬಳಲಿ ಹೋಗುತ್ತೀರಾ?

ಶಿಕ್ಷಕಿಯರು ಕೈ ಎತ್ತಿರಿ. ಶಿಕ್ಷಕಿಯರು ಆಯಾಸಗೊಳ್ಳುತ್ತೀರಾ? ಯಾರು ಒಮ್ಮೊಮ್ಮೆ ಅಲ್ಪಸ್ವಲ್ಪ ಸುಸ್ತಾಗುತ್ತಾರೋ ಅವರಂತೂ ಕೈ ಎತ್ತುವುದಿಲ್ಲ. ಶಿಕ್ಷಕಿಯರಲ್ಲಿ ಯಾರು ಎಂದೂ ಸುಸ್ತಾಗುವುದಿಲ್ಲವೋ ಅವರು ಕೈ ಎತ್ತಿರಿ. ಪಾಂಡವರು ಕೈ ಎತ್ತುತ್ತಾ ಇದ್ದಾರೆ. ಆದ್ದರಿಂದ ಪಾಂಡವರು ಪಾಸಾಗಿ ಬಿಟ್ಟರು. ಆಯಾಸಗೊಳ್ಳಬೇಡಿರಿ. ಸೋದರಿಯರು ಕೈ ಎತ್ತಲಿಲ್ಲ. ಅವರಿಗೆ ಅಭಿನಂದನೆಗಳು. ಯಾವ ಸಮಯದಲ್ಲಿ ದಣಿವು ಅನುಭವವಾಗುತ್ತದೆಯೋ ಆಗ ಎಲ್ಲಿಯಾದರೂ ಹೋಗಿ ನರ್ತನ ಮಾಡಲು ಪ್ರಾರಂಭ ಮಾಡಿಬಿಡಿ. ಬಚ್ಚಲು ಮನೆಯಲ್ಲಿಯೇ ಆಗಲಿ ನೃತ್ಯ ಮಾಡತೊಡಗಿದರೆ ಮೂಡ್ (ಮನಃಸ್ಥಿತಿ) ಬದಲಾವಣೆಯಾಗಿ ಬಿಡುವುದು. ಮನಸ್ಸಿನ ಖುಷಿಯಲ್ಲಿಯಾದರೂ ನರ್ತನ ಮಾಡಿರಿ. ಅದನ್ನು ಮಾಡಲು ಸಾಧ್ಯವಾಗದಿದ್ದರೆ ಸ್ಥೂಲದಲ್ಲಿ ಗೀತೆಯನ್ನು ಟೇಪ್ ರೇಕಾರ್ಡಿನ ಮೂಲಕ ನುಡಿಸಿರಿ ಹಾಗೂ ನರ್ತನ ಮಾಡಿರಿ. ವಿದೇಶಗಳಲ್ಲಿ ನೃತ್ಯ ಮಾಡುವುದಂತೂ ಎಲ್ಲರಿಗೂ ಬರುತ್ತದೆ. ನೃತ್ಯ ಮಾಡುವುದರಲ್ಲಿಯಂತೂ ನಿಪುಣರಾಗಿದ್ದಾರೆ. ಸೂಕ್ಷ್ಮದೇವತೆಯ ನೃತ್ಯವಂತೂ ಬರುತ್ತದೆ. ಒಳ್ಳೆಯದು. ಮುಂದೆ ಏನು ಮಾಡಬೇಕು? ನರ್ತನವಂತೂ ಎಲ್ಲರೂ ಮಾಡಿಬಿಟ್ಟಿರಲ್ಲವೇ?

ದಾದಿಯೊಂದಿಗೆ : ಈ ದಿನ ದಾದಿಯವರು ಕಡಿಮೆಯಿರುವುದರಿಂದ ನಿಮಗೆ ಅವಕಾಶವಿದೆ. (ಶೀಲ್ ದಾದಿ ಹಾಗೂ ರಾಮೀ ಬೆಹನ್ ಬಾಪ್‌ದಾದಾರ ಸಮ್ಮುಖದಲ್ಲಿ ಬಂದರು ಹಾಗೂ ಆಲಿಂಗನ ಮಾಡಿಕೊಂಡರು) ನಿಮ್ಮ ಮನೆಗೆ ಬಂದುಬಿಟ್ಟಿರಲ್ಲವೇ. ನಿಮ್ಮ ಮನೆಯಾದ ಮಧುಬನದಲ್ಲಿ ಬಂದು ಬಿಟ್ಟಿದ್ದೀರಾ? ಖುಷಿಯಾಗಿರುತ್ತೀರಿ ಹಾಗೂ ಸದಾ ಖುಷಿಯಾಗಿ ಇರಿ. ತುಂಬಾ ಚೆನ್ನಾಗಿ ಧೈರ್ಯದಿಂದ ಲೆಕ್ಕಾಚಾರವನ್ನು ಮುಕ್ತಾಯ ಮಾಡಿಕೊಂಡಿದ್ದೀರಿ. ಧೈರ್ಯವು ಚೆನ್ನಾಗಿ ಇದೆ. ಒಳ್ಳೆಯದು ತುಂಬಾ ಚೆನ್ನಾಗಿ ಖುಷಿಯಿಂದ ಇರಿ. ಡೈಮಂಡ್ ಜೂಬ್ಲಿ ಆಚರಿಸಲು ಬಂದಿದ್ದೀರಲ್ಲವೇ. ರಾಮೀ ಸೋದರಿಯೊಂದಿಗೆ, ಚೆನ್ನಾಗಿದ್ದೀಯಾ?

(ಪ್ರಫುಲ್ಲ ಸೋದರನು ದಿನಾಂಕ 22ನೆಯ ಫೆಬ್ರವರಿಯಂದು ಅಪಘಾತದಲ್ಲಿ ಶರೀರ ತ್ಯಾಗ ಮಾಡಿದರು) ಒಳ್ಳೆಯ ಮಗನಾಗಿದ್ದರು ಹಾಗೂ ಸೇವೆಯಲ್ಲಿ ಅಕ್ಕರೆ-ಉತ್ಸಾಹವುಳ್ಳವರಾಗಿಯೂ ಇದ್ದರು. ಆದರೆ ಲೆಕ್ಕಾಚಾರವು ಮುಕ್ತಾಯವಾಗುವ ಸಮಯ ಬಂದರೆ ಏನಾದರೊಂದು ಕಾರಣ ಆಗಿಯೇ ಬಿಡುತ್ತದೆ. ಆದರೆ ಈ ಮಗನು ಸ್ವಯಂ ಸಮರ್ಪಿತನಾಗಿದ್ದನು. (ಅನೇಕ ಮಕ್ಕಳು ಹೇಳುತ್ತಾರೆ - ಬಾಬಾರು ಮಕ್ಕಳಿಗೆ ಸಹಾಯ ಮಾಡುತ್ತಾರೆ. ಆದರೆ ಆ ಸಮಯದಲ್ಲಿ ಏಕೆ ಮಾಡಲಿಲ್ಲ?) ಅವರ ಲೆಕ್ಕಾಚಾರವು ಅದೇ ಡ್ರೈವರ್ (ಚಾಲಕ)ನೊಂದಿಗೆ ಅದೇ ಸ್ಥಾನದೊಂದಿಗೆ ಇರುತ್ತದೆ. ಪೂರ್ವನಿಶ್ಚಿತವಾದ ನಾಟಕವನ್ನು ಯಾರೂ ಬದಲಾವಣೆ ಮಾಡಲು ಸಾಧ್ಯವಾಗುವುದಿಲ್ಲ. (ಡಾಕ್ಟರ್‌ಗಳು ಉಳಿಸುವ ಪ್ರಯತ್ನವನ್ನು ತುಂಬಾ ಮಾಡಿದರು) ಎಲ್ಲರ ಪ್ರೀತಿಯೂ ಇತ್ತು. ಮೃತ್ಯುವಿನ ದಿನಾಂಕವನ್ನು ಬದಲಾವಣೆ ಮಾಡಲು ಸಾಧ್ಯವಿಲ್ಲ. ಭಗವಂತನೂ ಸಹ ಬದಲಾಯಿಸಲು ಸಾಧ್ಯವಿಲ್ಲ.

ರಿವೈಸ್ ಕೋರ್ಸ್ 27-02-1996.

***ಸತ್ಯತೆಯ ಬುನಾದಿ (ತಳಪಾಯ) ಪವಿತ್ರತೆಯಾಗಿದೆ ಹಾಗೂ ಅದಕ್ಕೆ ಗುರುತು - ಚಲನೆ ಹಾಗೂ ಚಹರೆಯಲ್ಲಿ ದಿವ್ಯತೆ.***

ಇಲ್ಲಿ ಮಾಡಿರುವ ಪುರುಷಾರ್ಥದಿಂದ ಸತ್ಯಯುಗದಲ್ಲಿ ಪವಿತ್ರತೆಯು ಸಹಜವಾಗಿ ಬಿಡುತ್ತದೆ. ಏಕೆಂದರೆ ಅಲ್ಲಿ ಅಪವಿತ್ರತೆಯ ನಾಮರೂಪಗಳು ಇರುವುದಿಲ್ಲ. ಅಪವಿತ್ರತೆ ಇರುತ್ತದೆ ಎಂಬುದೂ ತಿಳಿದಿರುವುದಿಲ್ಲ. ಆದ್ದರಿಂದ ನಿಮ್ಮ ಪವಿತ್ರತೆಯ ಪ್ರತ್ಯಕ್ಷ ಸ್ವರೂಪ ದೇವತೆ ಅರ್ಥಾತ್ ದಿವ್ಯತೆಯಾಗಿದೆ. ಅಲ್ಪ ಕಾಲದ ಕೀರ್ತಿ, ಗೌರವ, ಹೆಸರಿನ ಸಲುವಾಗಿ ಅನ್ಯ ಆತ್ಮರನ್ನು ಅನುಸರಿಸಿದರೆ ತಂದೆಯ ಹೃದಯದಲ್ಲಿ ನಿಮ್ಮ ಹೆಸರು ಮುಂದೆ ಇರುವುದಿಲ್ಲ ಮತ್ತು ಇಡೀ ಕಲ್ಪದ ಪ್ರಾಲಬ್ಧವೂ ರೂಪುಗೊಳ್ಳುವುದಿಲ್ಲ. ಅದನ್ನು ಬಾಪ್‌ದಾದಾರವರು ಶ್ರಮಪಟ್ಟು ಬೀಜ ಬಿತ್ತಿದಿರಿ, ವೃಕ್ಷವನ್ನು ಬೆಳೆಸಿದಿರಿ, ವೃಕ್ಷವು ಫಲವನ್ನೂ ಬಿಟ್ಟಿತು ಆದರೆ ಕಚ್ಚಾ ಫಲವನ್ನು ತಿಂದು ಬಿಟ್ಟ ಹಾಗೆ. ಎನ್ನುತ್ತಾರೆ. ಸದಾಕಾಲದ ಪ್ರಾಲಬ್ಧದ ಫಲವು ಸಮಾಪ್ತಿಯಾಗಿ ಬಿಡುತ್ತದೆ. ಎಂದು ಹೇಳುತ್ತಾ ಶಿವ ಪರಮಾತ್ಮ ಹೇಳಿರುವ ಮಹಾವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪವಿತ್ರತೆಯಿಂದ ಸತ್ಯಸ್ವರೂಪವಾಗಿ ಸ್ವತಹವಾಗಿ ಮತ್ತು ಸಹಜವಾಗಿದ್ದೇನೆ.

2. ನಾನು ಸತ್ಯತಾ ಶಕ್ತಿಯಿಂದ "ನಾನು ಆತ್ಮ" ಎಂಬ ಸತ್ಯಸ್ವರೂಪವನ್ನು, ತಂದೆಯ ಸತ್ಯ ಪರಿಚಯವನ್ನು, ಸೃಷ್ಟಿ ಚಕ್ರವನ್ನು ತಿಳಿದುಕೊಂಡಿದ್ದೇನೆ.

3. ದೇವಾತ್ಮನಾದ ನನ್ನ ಪಾತ್ರ ಕೂಡ ವಿಶ್ವದ ಚಕ್ರದಲ್ಲಿರುವ ಸರ್ವಾತ್ಮರಿಗಿಂತಲೂ ಶ್ರೇಷ್ಠವಾಗಿ ಇದೆ.

4. ನಾನು ವರ್ತಮಾನದ ಪುರುಷಾರ್ಥದಿಂದ ಸತ್ಯಯುಗದಲ್ಲಿ ಪವಿತ್ರತೆಯನ್ನು ಸಹಜವಾಗಿ ಮತ್ತು ಸಂಸ್ಕಾರವಾಗಿಸಿಕೊಂಡಿದ್ದೇನೆ.

5. ನಾನು ಸತ್ಯಸ್ವರೂಪದಲ್ಲಿ ಸ್ಥಿತವಾಗಿ ಸಂಕಲ್ಪ, ಮಾತು, ಕರ್ಮ, ಸಂಬಂಧ ಸಂಪರ್ಕಗಳಲ್ಲಿ ದಿವ್ಯತೆಯನ್ನು, ಖುಷಿಯನ್ನು ಅನುಭವ ಮಾಡುವ ಸತ್ಯ ಸ್ವರೂಪವಾಗಿದ್ದೇನೆ.

6. ನಾನು ಬ್ರಹ್ಮಾ ತಂದೆಯ ಸಮಾನವಾಗಿ ಸತ್ಯತಾ ಶಕ್ತಿಯನ್ನು ಧಾರಣೆ ಮಾಡಿ ಸಹಿಸಬೇಕಾಗಿ ಬಂದರೂ, ಮಣಿಯಬೇಕಾಗಿ ಬಂದರೂ, ಸೋಲ ಬೇಕಾಗಿ ಬಂದರೂ ಸೋಲನ್ನು ಸದಾಕಾಲದ ವಿಜಯದಂತೆ ಅನುಭವ ಮಾಡಿಕೊಂಡಿದ್ದೇನೆ.

7. ನಾನು ಸತ್ಯತಾ ಶಕ್ತಿಯಿಂದ ನಡೆಯುವ ಸತ್ಯವಾದ ಮಹಾರಥಿ.

8. ನಾನು ಸತ್ಯತೆಯಸಲುವಾಗಿ ಎಷ್ಟು ಸಹಿಸಬೇಕಾಗಿ ಬಂದರೂ ಸಹಿಸಿ ಸಹನ ಶಕ್ತಿಯ ರೂಪದಲ್ಲಿ ಜಮಾ ಖಾತೆಯನ್ನು ಹೆಚ್ಚಿಸಿಕೊಂಡಿದ್ದೇನೆ.

9. ನಾನು ಅಲ್ಪಕಾಲದ ಹೆಸರು, ಕೀರ್ತಿ, ಗೌರವಗಳ ಸಲುವಾಗಿ ಆತ್ಮರನ್ನು ಅನುಸರಿಸದೇ ನಾನು ಸತ್ಯವಾಗಿ ಇರುತ್ತಾ, ಇತರರಿಗೆ ಹಿಂದೆ ಇದ್ದಹಾಗೆ ಕಾಣಿಸಿದರು ಕೂಡ ನನ್ನ ಹೆಸರು ಸದಾ ತಂದೆಯ ಹೃದಯದಲ್ಲಿ ಮತ್ತು ಇಡೀ ಕಲ್ಪದ ಪ್ರಾಲಬ್ಧದಲ್ಲಿ ಮೊದಲ ನಂಬರ್ ನಲ್ಲಿ ಇದ್ದೇನೆ.

10. ನಾನು ಸತ್ಯತಾ ಶಕ್ತಿಯಿಂದ ಎಷ್ಟು ಸಹಿಸಬೇಕಾಗಿ ಬಂದರೂ  ದಿವ್ಯತೆಯನ್ನು ಧಾರಣೆ ಮಾಡಿ ನಿರ್ಭಯವಾಗಿದ್ದೇನೆ.

11. ನಾನು ಪರಿಸ್ಥಿತಿಗಳಲ್ಲಿ ಸಹಿಸಬೇಕಾಗಿ ಬಂದರೂ, ಎದುರಿಸಬೇಕಾಗಿ ಬಂದರೂ ಬ್ರಹ್ಮಾ ತಂದೆಯ ಜೀವನವನ್ನು ಎದುರಿಗಿಟ್ಟುಕೊಂಡು ಸತ್ಯತಾ ಶಕ್ತಿಯಿಂದ ವಿಜಯೀ ಆಗಿದ್ದೇನೆ.

12. ನಾನು ಕರ್ಮದಲ್ಲಿ ಸಾಕಾರ ಬ್ರಹ್ಮಾ ತಂದೆಯನ್ನು ಮತ್ತು ಅಶರೀರಿ ಆಗುವುದರಲ್ಲಿ ನಿರಾಕಾರ ಶಿವ ತಂದೆಯನ್ನು ಅನುಸರಿಸುತ್ತಿದ್ದೇನೆ.

13. ನಾನು ಮನಸ್ಸಿನಲ್ಲಿ, ಮಾತಿನಲ್ಲಿ(ನುಡಿಯಲ್ಲಿ), ಕರ್ಮದಲ್ಲಿ ದಿವ್ಯತೆಯನ್ನು ಧಾರಣೆ ಮಾಡಿರುವ ದಿವ್ಯ ಮೂರ್ತಿಯಾಗಿದ್ದೇನೆ.

14. ನಾನು ಒಂದು ಕ್ಷಣದಲ್ಲಿ ಅಶರೀರಿಯಾಗಿ ಅತೀತ  ಮತ್ತು ತಂದೆಗೆ ಪ್ರಿಯವಾಗಿರುವ ವ್ಯಾಯಾಮವನ್ನು ಇಡೀ ದಿನದ ಮಧ್ಯಮಧ್ಯದಲ್ಲಿ ಮಾಡುತ್ತಿದ್ದೇನೆ.